SCCH – 01
MVC No.6154/2024
PW1

**<u>ಸಾಕ್ಷಿಗೆ ದಿನಾಂಕಃ 27.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀಮತಿ.NP ರವರಿಂದಃ</u>**

1) ನಾನು ಈ ಪ್ರಕರಣದಲ್ಲಿ ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

   **<u>ಸೂಚನೆಃ</u>** ಸಾಕ್ಷಿದಾರರು ವೀಲ್ ಚೇರ್ ನಲ್ಲಿ ಬಂದಿದ್ದಾರೆ.

2) ಇದೇ ಅಪಘಾತದಲ್ಲಿ ನನ್ನ ಹೆಂಡತಿಯಾದಂತಹ ಶಾಜಿಯಾ ಬಾನು ರವರು ಸಹಾ ಗಾಯಗೊಂಡಿದ್ದರು ಮತ್ತು ಶಾಜಿಯಾ ಬಾನು ರವರು ಪರಿಹಾರವನ್ನು ಕೋರಿ **ಎಂವಿಸಿ 6153/2024** ಎಂಬ ಪ್ರಕರಣವನ್ನು ಮಾಡಿದ್ದಾರೆ ಮತ್ತು ಸದರಿ ಪ್ರಕರಣದಲ್ಲಿ ಪೊಲೀಸ್ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಮತ್ತು ಆ ದಾಖಲೆಗಳು ನಿ.ಪಿ.**1** ರಿಂದ **7** ಎಂದು ಗುರುತು ಆಗಿವೆ. ಆದಕಾರಣದಿಂದ ಎಂವಿಸಿ 6153/2024 ಪ್ರಕರಣದಲ್ಲಿ ನಿ.ಪಿ.**1** ರಿಂದ **7** ಎಂದು ಗುರುತು ಆಗಿರುವ ದಾಖಲೆಗಳನ್ನು ಈ ಪ್ರಕರಣದಲ್ಲಿಯೂ ಸಹಾ ಪರಿಗಣಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

3) ಗಾಯದ ಪ್ರಮಾಣ ಪತ್ರನ್ನು ನಿ.ಪಿ.**1** ಎಂದು, **Discharge Card** ಗಳನ್ನು ನಿ.ಪಿ.**2** ಮತ್ತು **3** ಎಂದು, **Discharge Summary** ಅನ್ನು ನಿ.ಪಿ.**4** ಎಂದು ಮತ್ತು ಒಂದು ಪತ್ರವನ್ನು ನಿ.ಪಿ.**5** ಎಂದು ಗುರುತಿಸಿದೆ.

4) **Out Patient Card** ಅನ್ನು ನಿ.ಪಿ.**6** ಎಂದು ಗುರುತಿಸಿದೆ. ಒಟ್ಟು **31** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**7** ಎಂದು ಗುರುತಿಸಿದೆ.

5) ಒಟ್ಟು **86 Medical Prescriptions** ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**8** ಎಂದು ಗುರುತಿಸಿದೆ.

6) ಒಟ್ಟು **29** ಅಡ್ವಾನ್ಸ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**9** ಎಂದು ಗುರುತಿಸಿದೆ.

7) ಈಗ ಸಾಕ್ಷಿದಾರರು ತಮ್ಮ ಮೂಲ ಆಧಾರ್ ಕಾರ್ಡ್ ಮತ್ತು ಮೂಲ ಚಾಲನಾ ಪರವಾನಗಿ ಮತ್ತು ಇದೇ ದಾಖಲೆಗಳ ಫೋಟೋ ಪ್ರತಿಗಳನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಗಳನ್ನು ಮತ್ತು ಫೋಟೋ

ಪ್ರತಿಗಳನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಗಳನ್ನು ಆಧಾರವಾಗಿ ಇಟ್ಟು ಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಗಳನ್ನು ಸಿದ್ದಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಗಳನ್ನು ನಿ.ಪಿ.**10** ಮತ್ತು **11** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಗಳನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

8) ಆದ ಕಾರಣದಿಂದ ಪ್ರಾರ್ಥನೆಯಂತೆ ನನಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಾದ ಶ್ರೀ.ಎಂ.ಆರ್. ರವರಿಂದಃ**

**1)** ನಾನು **7** ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.

**2)** ನನಗೆ ಇಂಗ್ಲೀಷ್ ಭಾಷೆಯನ್ನು ಓದಲು ಮತ್ತು ಬರೆಯಲು ಬರುವುದಿಲ್ಲ. ಅದರೆ, ತೆಲುಗು ಭಾಷೆಯನ್ನು ಓದಲು ಬರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ.

**3)** ಬೇರೆಯವರಿಗೆ ಸೇರಿದಂತಹ ಟೆಂಪೋ ಅನ್ನು ನಾನು ಚಾಲನೆ ಮಾಡಿಕೊಂಡು ಜೀವನ ಮಾಡುತ್ತಾ ಇದ್ದೆನು. ನನಗೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ

ಮತ್ತು ನಾನು ಕೆಲಸ ಮಾಡಬಾರದು ಎಂದು ಹೇಳಿ ವೈದ್ಯರು ನನಗೆ ಬರವಣಿಗೆಯಲ್ಲಿ ಹೇಳಿದ್ದಾರೆ ಮತ್ತು ಆ ದಾಖಲೆಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ.

**4)** ನನಗೆ ಅಂಗನ್ಯೂನತೆ ಉಂಟಾಗಿದೆ ಮತ್ತು ನನಗೆ ಚಾಲಕ ವೃತ್ತಿಯನ್ನು ಮುಂದುವರೆಸಲು ಸಾಧ್ಯವಿಲ್ಲ ಎಂದು ಹೇಳಿ ನಾನು ನನ್ನ ಚಾಲನಾ ಪರವಾನಗಿಯನ್ನು **Surrender** ಮಾಡಿರುವುದಿಲ್ಲ. ನಾನು ನನ್ನ ಚಾಲನಾ ಪರವಾನಗಿಯನ್ನು ಯಾವಾಗ ನವೀಕರಣ ಮಾಡಿಸಿಕೊಂಡಿದ್ದೇನೆ ಎಂದು ಹೇಳಲು ಸಾಧ್ಯವಿಲ್ಲ.

**5)** ಅಪಘಾತವು ಆದ ದಿನದಿಂದ **8** ತಿಂಗಳ ನಂತರ ನಾನು ನನ್ನ ಚಾಲನಾ ಪರವಾನಗಿಯನ್ನು ನವೀಕರಣ ಮಾಡಿಸಿಕೊಂಡಿದ್ದೇನೆ ಎಂದರೆ ಸುಳ್ಳು.

**6)** ಅಪಘಾತವು ಆದ ತಕ್ಷಣ ನನಗೆ ಪ್ರಜ್ಞೆ ಹೋಯಿತು. ಆಸ್ಪತ್ರೆಯಿಂದ ನಾನು ನಮ್ಮ ಮನೆಗೆ ಬಂದ ನಂತರ ನನಗೆ ಪ್ರಜ್ಞೆ ಬಂದಿದೆ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಏಕ ಮುಖ ಸಂಚಾರದ ರಸ್ತೆಯಲ್ಲಿ ನಾನು ನನ್ನ ಕಾರನ್ನು ವಿರುದ್ಧ ದಿಕ್ಕಿನಲ್ಲಿ ಚಾಲನೆ ಮಾಡಿದ್ದೇನೆ ಮತ್ತು ಅಪಘಾತವು ನನ್ನ ತಪ್ಪಿನಿಂದಲೇ ಆಗಿದೆ ಎಂದು ಪ್ರಥಮ ವರ್ತಮಾನ ವರದಿಯಲ್ಲಿ ಪೊಲೀಸರು ಹೇಳಿದ್ದಾರೆ ಎಂದರೆ ಸುಳ್ಳು.

**7)** ಅಪಘಾತ ಆದ ನಂತರ ನಾನು ಒಂದು ಬಾರಿ ಪೊಲೀಸರಿಗೆ ದೂರನ್ನು ಕೊಟ್ಟಿದ್ದೇನೆ.

**8)** ನಾನು ಹೇಳಿದ ಹಾಗೆ ನಾನು ಪೊಲೀಸರಿಗೆ ಅಪಘಾತದ ಸಂಬಂಧವಾಗಿ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸುಳ್ಳು.

**9)** ನನಗೆ ಆಗಿದ್ದ ಗಾಯಗಳೆಲ್ಲವೂ ಸಂಪೂರ್ಣವಾಗಿ ಗುಣ ಆಗಿವೆ ಎಂದರೆ ಇವತ್ತಿಗೂ ಸಹಾ ನನಗೆ ನಡೆಯಲು ಆಗುವುದಿಲ್ಲ.

**10)** ನನಗೆ ಯಾವುದೇ ಶಸ್ತ್ರ ಚಿಕಿತ್ಸೆಯನ್ನು ಮಾಡಿರುವುದಿಲ್ಲ ಎಂದರೆ ಸುಳ್ಳು.

**11)** ನನಗೆ ಅಗಿದ್ದ ಮೂಳೆ ಮುರಿತವು ಈಗ ಸಂಪೂರ್ಣವಾಗಿ ಗುಣ ಆಗಿದೆ ಎಂದರೆ ಸುಳ್ಳು. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದಿಲ್ಲ ಎಂದರೆ ಸುಳ್ಳು. ನಾನು ವೀಲ್ ಚೇರ್ ಮೇಲೆ ಓಡಾಡಬೇಕು ಎಂದು ಹೇಳಿ ವೈದ್ಯರು ನನಗೆ ಯಾವುದೇ ಸೂಚನೆ ನೀಡಿಲ್ಲ ಎಂದರೆ ನನಗೆ ನಡೆಯಲು ಸಾಧ್ಯವಿಲ್ಲ ಹಾಗಾಗಿ ನಾನು ವೀಲ್ ಚೇರ್ ಮೇಲೆ ಬಂದಿದ್ದೇನೆ. ಮನೆಯಲ್ಲಿ ನಾನು ಊರುಗೋಲು ಹಿಡಿದುಕೊಂಡು ಓಡಾಡುತ್ತೇನೆ.

**12)** ನನಗೆ ಕೂರಲು ಆಗುವುದಿಲ್ಲ ಮತ್ತು ನಡೆಯಲು ಆಗುವುದಿಲ್ಲ ಎಂದು ಹೇಳಿ

ಸುಳ್ಳು ಸಂಗತಿಯನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ ಎಂದರೆ ಸುಳ್ಳು. ನಾನು ಚಾಲಕ ವೃತ್ತಿಯನ್ನು ಮಾಡುತ್ತಾ ಇದ್ದೆನು ಮತ್ತು ನನಗೆ ಸಂಬಳ ಬರುತ್ತಾ ಇತ್ತು ಎಂಬ ಬಗ್ಗೆ ಯಾವುದೇ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

**13)** ಕೇವಲ ಪರಿಹಾರ ಪಡೆಯಲು ನನ್ನ ಉದ್ಯೋಗ ಮತ್ತು ಆದಾಯದ ಬಗ್ಗೆ ನಾನು ಸುಳ್ಳು ಹೇಳುತ್ತಾ ಇದ್ದೇನೆ ಎಂದರೆ ಸುಳ್ಳು. ನನ್ನ ಚಿಕಿತ್ಸೆಗಾಗಿ ನಾನು **15** ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ ಎಂಬುದಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

**14)** ನಾನು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ನಾನು ಯಾವುದೇ ಮೆಡಿ ಕ್ಲೇಮು ಪಾಲಿಸಿಯನ್ನು ಖರೀದಿ ಮಾಡಿರುವುದಿಲ್ಲ. ಅಪಘಾತಕ್ಕಿಂತ ಮೊದಲು ನಾನು ಎಷ್ಟು ಆರೋಗ್ಯವಾಗಿ ಇದ್ದೆನೋ ಇವತ್ತಿಗೂ ಸಹಾ ಅದೇ ರೀತಿಯಲ್ಲಿಯೇ ಆರಾಮವಾಗಿ ಇದ್ದೇನೆ ಎಂದರೆ ಸುಳ್ಳು.

**15)** ಮುಂದೆ ನಾನು ಮತ್ತೆ ಚಾಲಕ ವೃತ್ತಿಯನ್ನು ಮಾಡಬೇಕು ಎಂದು ಉದ್ದೇಶ ಹೊಂದಿದ್ದೇನೆ ಮತ್ತು ಆ ಕಾರಣದಿಂದಲೇ ನಾನು ನನ್ನ ಚಾಲನಾ ಪರವಾನಗಿಯನ್ನು ಸರಂಡರ್ ಮಾಡಿರುವುದಿಲ್ಲ ಎಂದರೆ ಸುಳ್ಳು.

**16)** ಅಪಘಾತದ ನಂತರ ನಾನು ಆಸ್ಪತ್ರೆಗೆ ಹೋದಾಗ ವೈದ್ಯರ ಬಳಿ ಅಪಘಾತದ ಹಿನ್ನೆಲೆಯನ್ನು ಏನೆಂದು ಜನರು ಹೇಳಿದ್ದಾರೆ ಎಂದು ನನಗೆ ಗೊತ್ತು.

**17)** ನಾನು ಹಾಜರುಪಡಿಸಿರುವಂತಹ **Discharge Summary** ಗಳನ್ನು ಸೃಷ್ಟಿ ಮಾಡಿಕೊಂಡು ತಂದು ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

**18)** ನಾನು ಈಗ ಚಿಕಿತ್ಸೆ ಪಡೆಯುತ್ತಾ ಇದ್ದೇನೋ ಹೇಗೆ ಎಂದರೆ ಮಾತ್ರೆಗಳನ್ನು ತೆಗೆದುಕೊಳ್ಳುತ್ತಾ ಇದ್ದೇನೆ. ಸುಮಾರು **2** ತಿಂಗಳ ಹಿಂದೆ ನಾನು ಆಸ್ಪತ್ರೆಗೆ ಹೋಗಿದ್ದೆನು.

**ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.